**ಸಾಕ್ಷಿಯನ್ನು ದಿಃ17.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರಿಂದಃ</u>**

1. ವಾದಿ ಶ್ರೀನಿವಾಸ ರವರು ನಮ್ಮ ಊರಿನವರು. ಅವರು ನಮ್ಮ ಸಂಬಂಧಿಕರಲ್ಲ.
2. ನಿಮ್ಮ ಮಗಳನ್ನು ವಾದಿಯ ತಮ್ಮ ರಾಜು ರವರಿಗೆ ಕೊಟ್ಟು ಮದುವೆ ಮಾಡಿದ್ದೀರಾ ಎಂದರೆ ಸರಿ.
3. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿ.
4. ಈ ದಾವೆಯನ್ನು ಸ.ನಂ.50 ಕ್ಕೆ ಸಂಬಂಧಪಟ್ಟಂತೆ ಹಾಕಿದ್ದಾರೆ. ಅದರ ಚಕ್ಕುಬಂದಿ ಗೊತ್ತು. ಪೂರ್ವಕ್ಕೆಃಬೆಟ್ಟದಪುರ ಪಿರಿಯಾಪಟ್ಟ ರಸ್ತೆ, ಪಶ್ಚಿಮಕ್ಕೆಃ ಪರಮೇಶ್ವ ರವರ ಜಮೀನು, ಉತ್ತರಕ್ಕೆಃ ಕಾಲೋನಿ ಉಂಬಳಿ ಜಮೀನು ಹಾಗೂ ದಕ್ಷಿಣಕ್ಕೆ ಪುಟ್ಟಮ್ಮನ ಜಮೀನು.
5. ದಾಸೇಗೌಡರ ವಂಶವೃಕ್ಷದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ, ಇಲ್ಲ.

6. ಈ ದಿನ ನಿಮ್ಮನ್ನು ಸಾಕ್ಷಿ ಹೇಳಲು ಯಾರು ಕರೆದರು ಎಂದರೆ ಶ್ರೀನಿವಾಸ ಕರೆದರು.

7. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

8. ಸ.ನಂ.50 ಈಗ 50/1 ಹಾಗೂ 50/2 ಎಂದು ಎರಡು ಪೋಡುಗಳಾಗಿದೆ ಎಂದರೆ ಸರಿ. ಅದರಲ್ಲಿ 2 ಎಕರೆ 2 ಗುಂಟೆ ಜಮೀನು ಲಕ್ಕಯ್ಯನವರರಿಗೆ ಸೇರಿದ್ದಾ? ಎಂದರೆ ನನಗೆ ಗೊತ್ತಿಲ್ಲ.

9. 1 ನೇ ವಾದಿಯ ಪತಿ ಹಾಗೂ 2 ರಿಂದ 4 ನೇ ಪ್ರತಿವಾದಿಗಳ ತಂದೆ ನಿಮಗೆ ಗೊತ್ತಾ ಎಂದರೆ ಗೊತ್ತು. ಸದರಿ ಲಕ್ಕಯ್ಯ ನವರ ತಂದೆ ಹೆಸರು ನನಗೆ ಗೊತ್ತಿಲ್ಲ.

10. ಲಕ್ಕಯ್ಯನ ತಂದೆ ಹೆಸರು ಕಾಳ ಎಂದರೆ, ಅಂಚೆ ಕಾಳಪ್ಪ ಎಂದು ಕರೆಯುತ್ತಿದ್ದರು. ಸದರಿ ಕಾಳ ರವರ ತಂದೆ ಹೆಸರು ನನಗೆ ಗೊತ್ತಿಲ್ಲ.

11. ಸ.ನಂ.50 ರಲ್ಲಿ 2 ಎಕರೆ 2 ಗುಂಟೆ ಪ್ರತಿವಾದಿಗಳ ಸ್ವಾಧೀನ ಮತ್ತು ಮಾಲೀತ್ವದಲ್ಲಿ ಇದೆ ಎಂದರೆ ಗೊತ್ತಿಲ್ಲ.

12. ದಾವಾ ಆಸ್ತಿ ಪ್ರತಿವಾದಿಗಳ ಸ್ವಾಧೀನ ಹಾಗೂ ಮಾಲೀಕತ್ವದಲ್ಲಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

13. ವಾದಿಯು ನಿಮ್ಮ ಅಳಿಮಯ್ಯ ಆದ ಕಾರಣ ಅವರ ಪರವಾಗಿ ಹಾಗೂ ಪ್ರತಿವಾದಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ